'ಅಷ್ಟು ದೂರ ಹೋಗುವಾಗ ಡ್ರೈವರ್‌ನ ಕರೆದುಕೊಂಡು ಹೋಗಬೇಕು ಸೋನಾ' ಕಾಳಜಿ ತೋರಿದ್ದ ಗುನ್ನಾಲಾಲ್.

'ಇರಲಿ ಬಿಡು ಗುನ್ನಾ, ನಾನೇನು ಇನ್ನೂ ಚಿಕ್ಕ ಮಗು ಅಲ್ವಲ್ಲ' ಸಮಾಧಾನದ ಮಾತುಗಳನ್ನು ಆಡಿದ್ದ.

'ಇವತ್ತು ಆರು ಗಂಟೆಗೆ ಮುಂಬಾದೇವಿಯ ದೇವಸ್ಥಾನಕ್ಕೆ ಹೋಗಬೇಕು. ಮನೆಗೆ ಬಂದು ರೆಸ್ಟ್ ತೆಗೆದುಕೊಂಡು ಆರು ಗಂಟೆಗೆಲ್ಲ ರೆಡಿಯಾಗಿರು. ಎಲ್ಲರೂ ಹೋಗೋಣ'.

ಗುನ್ನಾಲಾಲನ ಮಾತು ಕೇಳಿ ಆಸ್ಕರ್ ವೈಲ್ಡನಿಗೆ ಅಚ್ಚರಿಯಾಯ್ತು. ಏಕೆಂದರೆ, ನಿನ್ನೆ ತಾನೇ ಮುಂಬಾದೇವಿ ಹಾಗೂ ಸಿದ್ಧಿವಿನಾಯಕ ದೇವಸ್ಥಾನಗಳಿಗೆ ಹೋಗಿ ಬಂದಿದ್ದರು. ಪ್ರತಿ ಶುಕ್ರವಾರದಂದು ಆ ಎರಡೂ ದೇವಸ್ಥಾನಗಳಿಗೆ ಹೋಗುವ ಪರಿಪಾಟವನ್ನು ಗುನ್ನಾಲಾಲ್ ಬಹಳ ವರ್ಷಗಳಿಂದ ರೂಢಿಸಿಕೊಂಡು ಬಂದಿದ್ದಾನೆ. ಅದು ಬಿಟ್ಟರೆ ಕುಟುಂಬದಲ್ಲಿ ಯಾರದ್ದಾದರೂ ಹುಟ್ಟಿದ ದಿನವಿದ್ದರೂ ಕಡ್ಡಾಯವಾಗಿ ಎರಡೂ ದೇವಸ್ಥಾನಗಳಿಗೆ ಹೋಗಿ ವಿಶೇಷ ಪೂಜೆಯನ್ನು ಸಲ್ಲಿಸಿ ಬರುತ್ತಾರೆ. ಮನೆಯಲ್ಲಿ ಯಾರ ಬರ್ತಡೇನೂ ಇಲ್ಲ. ಆ ಕಾರಣದಿಂದಾಗಿಯೇ ವೈಲ್ಡನಿಗೆ ತಾತನ ಮಾತು ಕೇಳಿ ಅಚ್ಚರಿಯಾಗಿದ್ದಿದ್ದು. ಆ ಅಚ್ಚರಿಯಲ್ಲೇ–

'ಏನು ಗುನ್ನಾ ವಿಶೇಷ?' ಎಂದು ಕೇಳಿದ್ದ.

'ಅಂಧೇರಿಯ ಪೀಟರ್ ಸ್ಕಾಟ್ ಗಂಟೆ ಹಿಂದೆ ಹೃದಯಾಘಾತದಿಂದಾಗಿ ಸತ್ತು ಹೋದನಂತೆ. ಅದೊಂದು ಆತ್ಮಹತ್ಯೆ ಇರಬೇಕೆಂದು ಕೂಡ ಪೊಲೀಸರು ಶಂಕಿಸುತ್ತಿದ್ದಾರಂತೆ'.

ಗುನ್ನಾಲಾಲನ ಮಾತುಗಳನ್ನು ಮಧ್ಯದಲ್ಲಿಯೇ ತುಂಡರಿಸಿ 'ಯಾರು ಗುನ್ನಾ ಪೀಟರ್ ಸ್ಕಾಟ್?' ಎಂದು ಕುತೂಹಲದಿಂದ ಕೇಳಿದ್ದ.

'ಅಂಧೇರಿಯ ನಂಬರ್ ಒನ್ ಬಿಲ್ಡರುಗಳಲ್ಲಿ ಒಬ್ಬ. ಅವರ ಅಣ್ಣ ಚೋಟಾ ರಾಜನ್ ಜೊತೆಯಲ್ಲಿ ಇದ್ದವನಂತೆ. ಈ ಪೀಟರ್ ಸ್ಕಾಟ್ ಡಿ ಗ್ಯಾಂಗ್ ಜೊತೆ ಗುದ್ದಾಡಿದ್ದನಂತೆ. ಆತನ ನಿಜವಾದ ಹೆಸರು ಗುಲ್ಶನ್ ಕುಮಾರ್. ನಮ್ಮವರೇ. ಆದರೆ ಅವನು ವ್ಯವಹಾರಗಳಿಗೆ ಕುಂತಾಗ ಕಂಪಲ್ಸರಿ ಪೀಟರ್ ಸ್ಕಾಟ್ ವಿಸ್ಕಿಯನ್ನು ಕುಡಿಯುವುದು ರೂಢಿಯಂತೆ. ಹಾಗಾಗಿ ಅವನು ಆ ವಿಸ್ಕಿಯ ಹೆಸರಿನಲ್ಲೇ ಖ್ಯಾತಿ ಪಡೆದಿರುವನಂತೆ' ಗುನ್ನಾಲಾಲ್ ವಿವರವಾಗಿ ಹೇಳಿದ್ದ.

'ಅದು ಸರಿ ಗುನ್ನಾ, ಅವನು ಸಾಯುವುದಕ್ಕೂ ನಾವು ದೇವಸ್ಥಾನಕ್ಕೆ ಹೋಗುವುದಕ್ಕೂ ಸಂಬಂಧವೇನು ಗುನ್ನಾ?' ಕೇಳಿದ್ದ ವೈಲ್ಡ್.

'ದೇವರು ಸತ್ಯ ಮತ್ತು ನ್ಯಾಯದ ಕಡೆ ಯಾವತ್ತೂ ಇರುತ್ತಾನೆ. ಹೋದ ವಾರ ಪೀಟರ್ ಸ್ಕಾಟ್ ನನ್ನನ್ನು ಕರೆಸಿಕೊಂಡು ವಿಕ್ರಂ ದೇಶಪಾಂಡೆಯೊಂದಿಗೆ ಸಂಬಂಧ ಬೆಳೆಸಕೂಡದೆಂದು ವಾರ್ನಿಂಗ್ ಕೊಟ್ಟಿದ್ದ. ಅವನ ತಮ್ಮನ ಮಗ ಪೂರ್ವಿಕಾಳನ್ನು ವರ್ಷದಿಂದ ಪ್ರೀತಿಸುತ್ತಿದ್ದಾನಂತೆ. ಅವಳನ್ನೇ ಮದುವೆಯಾಗಬೇಕೆಂದು ಹಟ ಹಿಡಿದಿರುವನಂತೆ. ಮಾತನಾಡುವಾಗ ಪಕ್ಕದಲ್ಲಿ ಪಿಸ್ತೂಲ್ ಇಟ್ಟುಕೊಂಡು ಚೋಟಾ ರಾಜನ್, ದಾವೂದ್ ಹೆಸರೇಳಿಕೊಂಡು ಹೆದರಿಸಲು ಪ್ರಯತ್ನಿಸಿದ. ಅರುಣ್ ಗಾವ್ಳಿ ನಮ್ಮ ಫ್ಯಾಕ್ಟರಿಗೆ ಎರಡು ಸಾರಿ ಬಂದಿದ್ದ. ನೀನು ಹುಟ್ಟಿದಾಗ ಆಗಿನ ಮುಂಬಯಿಯ ದೊಡ್ಡ ಡಾನ್ ಮಸ್ತಾನ್ ಜೊತೆ ಯಾವುದೋ ವಿಷಯಕ್ಕೆ ಮಾತನಾಡಿದ್ದೆ. ಅವರೂ ನಮ್ಮಂತೆ ಮನುಷ್ಯರೇ ಅಲ್ಲವೆ? ಪೀಟರ್ ಸ್ಕಾಟ್‌ಗೆ ಹಾಗೆಯೇ ಆಗಲಿ ಎಂದು ಹೇಳಿ ಬಂದಿದ್ದೆ. ದೇವರು ಸದಾ ಒಳ್ಳೆಯವರ ಹಿಂದೆ ಇರ್ತಾನೆ ಅನ್ನೋದು ಹಂಡ್ರಡ್ ಪರ್ಸೆಂಟ್ ನಿಜ' ಗುನ್ನಾಲಾಲ್ ಮಾತು ನಿಲ್ಲಿಸಿದಾಗ ಒಂದಿಷ್ಟು ಭಾವುಕನಾಗಿದ್ದ.

'ಟೇಕ್ ಇಟ್ ಈಸಿ ಗುನ್ನಾ' ಸಮಾಧಾನಪಡಿಸುವವನಂತೆ ಹೇಳಿದ್ದ ಆಸ್ಕರ್ ವೈಲ್ಡ್. ಮುಂಬಯಿ ನಿಜಕ್ಕೂ ಒಂದು ವಿಶಿಷ್ಟವಾದ ನಗರ. ಶ್ರೀಮಂತಿಕೆ, ಬಡತನ, ಅಂಡರ್ ವರ್ಲ್ಡ್, ಕಾಮಾಟಿಪುರ, ಸಿನಿಮಾ ಜಗತ್ತು ಎಲ್ಲವೂ ಒಂದು ವಿಶಿಷ್ಟ ಸ್ಥಾಯಿಯಲ್ಲಿ ಮಿಳಿತಗೊಂಡ ಸೊಬಗಿನ ಚಿತ್ರಪಟದಂತೆ ಅನ್ನಿಸಿತವನಿಗೆ. ಇದನ್ನೊಂದು ಸಾಹಿತ್ಯಿಕ ಪರಿಭಾಷೆಯಲ್ಲಿ ಹಿಡಿದಿಡಲು ಸಾಧ್ಯವೇ ಎನ್ನುವ ಆಲೋಚನೆ ಬರುವುದಕ್ಕೂ ಮತ್ತೊಮ್ಮೆ ಫೋನ್ ರಿಂಗಾಗುವುದಕ್ಕೂ ಒಂದೇ ಆಗಿತ್ತು.

ಈ ಸಾರಿಯ ಫೋನ್ ಪೂರ್ವಿಕಾಳದಾಗಿತ್ತು.

'ಹಲೋ' ನಿರಪೇಕ್ಷಿತ ಧ್ವನಿ ಅವನಿಂದ.

'ಎಲ್ಲಿದ್ದೀಯಾ ಸೋನಾ' ಅವಳ ಧ್ವನಿಯಲ್ಲಿ ಲವಲವಿಕೆಗೇನೂ ಕೊರತೆಯಿರಲಿಲ್ಲ.

'ಯಾರನ್ನೋ ಭೇಟಿಯಾಗಲು ದೊಂಬಿವಿಲಿಗೆ ಹೋಗಿದ್ದೆ. ವಾಪಸ್ಸು ಬರ್ತಾ ಇದ್ದೀನಿ'.

'ಹೊಸ ಲವರ್‌ನ ಮೀಟ್ ಮಾಡ್ಲಿಕ್ಕೇನಾದರೂ ಹೋಗಿದ್ದಾ?' ತಮಾಷೆಯಲ್ಲಿ ಮಿಂದ ಮಾತುಗಳು. ಅವನು ಉತ್ತರಿಸಲು ತಿಣುಕಾಡುತ್ತಿದ್ದ.

'ನಿನ್ನ ಮೈಂಡ್ ಫ್ರೀ ಆಗ್ಬೇಕಿದ್ರೆ ಮೊದಲು ಪೊಸೆಸಿವ್‌ನೆಸ್‌ನ ಬಿಟ್ಬಿಡ್ಬೇಕು. **Actually** ಹೆಣ್ಣು ಮಕ್ಕಳಲ್ಲಿ ಪೊಸೆಸಿವ್‌ನೆಸ್ ಜಾಸ್ತಿ ಇರೋದು. ಅದಿದ್ರೆ ನೆಮ್ಮದಿಯಿಂದ ಇರ್ಲಿಕ್ಕೆ ಆಗೋದಿಲ್ಲ. ಲಾಸ್ ವೆಗಾಸಿನಿಂದ ಬರುವಾಗ ಹೇಳಿದ್ದೆನಲ್ಲ ನಾನು; ನಮ್ಮ ಜೊತೆ ಹಿಂದಿನ ಸಂಗತಿಗಳನ್ನು ಕ್ಯಾರಿ ಮಾಡಬಾರದು ಅಂತ. ಅವು ಮನಸ್ಸನ್ನು ಭಾರ ಮಾಡಿಬಿಡ್ತವೆ. ಇರಲಿ, ನನ್ನ ವಿಷಯದಲ್ಲಿ ನಿಮ್ಮ ತಾತನ್ನ ಕರೆದು ಬೆದರಿಸಿದ್ದರಲ್ಲ ಬಿಲ್ಡರ್ ಪೀಟರ್ ಸ್ಕಾಟ್, ಅವರು ಹಾರ್ಟ್ ಅಟ್ಯಾಕ್ ಆಗಿ ಇವತ್ತು ಸತ್ತು ಹೋದರಂತೆ. ಅವರ ತಮ್ಮನ ಮಗ ಅಭಿನವ್ ಕುಮಾರ್ ನನ್ನ ಹಿಂದೆ ಬಿದ್ದಿದ್ದ. ಹೋಗಲಿ ನಮ್ಮವನು ಅಂತ ಒನ್ಸ್‌ದಾರು ಬಾರಿ ಐಸ್‌ಕ್ರೀಮ್ ಪಾರ್ಲರ್, ಸಿನಿಮಾ ಅಂತ ತಿರುಗಾಡಿದ್ದೆ. ಅವನಿಗೊಂದು ಕಿಸ್ ಸಹ ಕೊಟ್ಟೋಳಲ್ಲ ನಾನು. ಮನೆಗೂ ಕರೆದಿದ್ದೆ ಎರಡು ಬಾರಿ. ಅದನ್ನೇ ಲವ್ ಅಂತ ಮಿಸ್ ಅಂಡರ್ ಸ್ಟ್ಯಾಂಡ್ ಮಾಡಿಕೊಂಡಿದಾನೆ ಡರ್ಟಿ ಫೆಲೋ. ಪೀಟರ್ ಸ್ಕಾಟ್ ನೂರಾರು ಕೋಟಿ ರೂಪಾಯಿಗಳ ಮೂರ್ನಾಲ್ಕು ಫ್ರಾಡ್ ಪ್ರಾಜೆಕ್ಟ್ ಮಾಡುತ್ತಿದ್ದನಂತೆ. ನಮ್ಮ ಡ್ಯಾಡಿ ನೋಟೀಸ್ ಕೊಟ್ಟು ಕ್ಯಾನ್ಸಲ್ ಮಾಡಿಸಿದ್ದರಂತೆ. ಹಾಗಾಗಿ ಹಾರ್ಟ್ ಅಟ್ಯಾಕ್ ಆಯಿತಂತೆ. ಆತ್ಮಹತ್ಯೆ ಅಂತ ಇನ್ನೊಂದು **version** ಕ್ರಿಯೇಟ್ ಮಾಡಿದ್ದಾರಂತೆ ಅಪ್ಪನನ್ನು ಸಿಕ್ಕಿಸಲು. ಅಪ್ಪ ಯಾವಾಗಲೂ **illegal actions** ತಗೊಳ್ಳೋದೇ ಇಲ್ಲ. ಹಿ ಈಸ್ ಆಲ್ವೇಸ್ ಪರ್ಫೆಕ್ಟ್ ಇನ್ ಹಿಸ್ ಮೂವ್ಸ್. ಅದಿರಲಿ, ಎರಡು ವಾರ ಬಿಟ್ಟು ಹದಿನೈದು ದಿನದ ಮಟ್ಟಿಗೆ ಲಂಡನ್ನಿಗೆ ಹೋಗಿ ಬರೋಣ ಬರ್ತಿಯಾ. ಅಲ್ಲೇ ಯಾವುದಾದರೂ ಒಳ್ಳೆ ಬಿಸಿನೆಸ್ ಸ್ಟಾರ್ಟ್ ಮಾಡೋಣ ಅನ್ನೊ ಪ್ಲಾನಿದೆ. ಅಪ್ಪ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ. ಅಲ್ಲೊಬ್ಬ ದೊಡ್ಡ ಡೈಮಂಡ್ ಮರ್ಚೆಂಟ್ ಫ್ರೆಂಡ್ ಇದಾನೆ ನನಗೆ. ಪಾರ್ಟ್ನರ್ ಆಗಲು ಮುಂದೆ ಬಂದಿದ್ದಾನೆ...'

ಅವಳ ಮಾತುಗಳನ್ನು ಮಧ್ಯದಲ್ಲಿ ತುಂಡರಿಸಿ, 'ಇಲ್ಲ, ನಾನು ಬರಲಿಕ್ಕೆ ಆಗಲ್ಲ. ಪಿಎಚ್‌ಡಿಗೆ ಎನ್ರೋಲ್ ಮಾಡಿಸ್ಬೇಕು ನಾನು' ಎಂದು ಹೇಳಿದ ಆಸ್ಕರ್ ವೈಲ್ಡ್.

'ಕ್ಯಾರಿ ಆನ್ ಹಾಗಾದರೆ, ನಾವು ಒಬ್ಬರಿಗೊಬ್ಬರು ಮ್ಯಾಚ್ ಆಗೋದಿಲ್ಲ. ಕನಿಷ್ಠ ಇಬ್ಬರ ಅಭಿರುಚಿಗಳೂ ಫಿಫ್ಟಿ ಪರ್ಸೆಂಟ್ ಆದರೂ ಟ್ಯಾಲಿ ಆಗದಿದ್ದರೆ ಲೈಫಲ್ಲಿ ತುಂಬಾ ದೂರ ಒಟ್ಟಿಗೆ ಟ್ರಾವೆಲ್ ಮಾಡೋದಕ್ಕೆ ಕಷ್ಟ ಆಗ್ತದೆ. ಬಲವಂತವಾಗಿ ಒಟ್ಟಿಗೆ ಬದುಕೋ ಬದ್ಲು ಖುಷಿಯಾಗಿ ಆಗಾಗ ಮೀಟ್ ಮಾಡೋದ್ರಲ್ಲಿ ಒಂದು ರೀತಿ ಹೊಸತನ ಇರ್ತದೆ. ಸೋ ನಾನು ಲಂಡನ್ನಲ್ಲಿರುವಾಗ ನಿನಗೆ ಬೇಕು ಅನ್ನಿಸಿದಾಗ ಬಂದು ಒಂದು ವೀಕ್ ಸ್ಟೇ ಮಾಡಿ ಬಾ. ಲೈಫನ್ನ ಆಗಾಗ ರಿಫ್ರೆಶ್ ಮಾಡಿಕೊಳ್ತಾ ಇದ್ದರೆ ಮೈಂಡ್ ಅಂಡ್ ಬಾಡಿ ಸದಾ ಆಕ್ಟೀವಾಗಿರ್ತವೆ' ಎಂದು ಫೋನ್ ಕಟ್ ಮಾಡಿದ್ದಳು.

ಆ ಕ್ಷಣ ಅವನು ತುಂಬಾ ನಿರಾಳನಾಗಿಬಿಟ್ಟ. ಅರೆ, ಪಡೆಯುವುದರಲ್ಲೂ ಖುಷಿಯಿದೆ; ಕಳೆದುಕೊಳ್ಳುವುದರಲ್ಲೂ ಖುಷಿಯಿದೆ. ದೇಹ ಮತ್ತು ಮನಸ್ಸು ಎರಡಕ್ಕೂ ಆಪೋಶನೆಯಲ್ಲಿ ಸಿಗುವ ಸುಖದ ಸಾಂದ್ರತೆಗಿಂತ ವಿಸರ್ಜನೆಯಲ್ಲಿ ಪಡೆಯುವ ಸುಖದ ಸಾಂದ್ರತೆ ಹೆಚ್ಚಿರುತ್ತದೆ. ಹೀಗೆ ಅವನ ಮನದಲ್ಲಿ ಹೊಸ ಆಲೋಚನೆ ಆವಿರ್ಭವಿಸಲು ಅನೇಕ ವ್ಯಕ್ತಿಗಳು, ಅನೇಕ ಘಟನೆಗಳು ಕಾರಣವಾಗತೊಡಗಿದವು. ಅವನ ಮುಖದಲ್ಲಿ ಮಂದಹಾಸ ತೇಲುತ್ತಿರುವಾಗ ಮತ್ತೆ ಫೋನ್ ರಿಂಗಾಗಿತ್ತು. ಅನ್ನೋನ್ ನಂಬರ್ ಆಗಿದ್ದರೂ ಖುಷಿಯಿಂದ ಫೋನ್ ರಿಸೀವ್ ಮಾಡಿಕೊಂಡು

'ಹಲೋ' ಎಂದ.

'ಹೇಗಿದ್ದೀಯಾ ಸೋನಾ? ಸಾರಿ ಸಾರಿ ಆಸ್ಕರ್ ವೈಲ್ಡ್' ಥಟ್ಟನೆ ಅದು ಮಾಥ್ಯೂ ಅಲೆಗ್ಸಾಂಡರನ ಧ್ವನಿಯೆಂಬುದು ಪತ್ತೆಯಾಗಿತ್ತು ವೈಲ್ಡನಿಗೆ.

'ಚನ್ನಾಗಿದ್ದೀನಿ, ಹೌ ಎಬೌಟ್ ಯು?'

'ಅಯ್ಯೋ ನಾನು ದಿನದಲ್ಲಿ ಇಪ್ಪತ್ತನಾಲ್ಕು ಗಂಟೇನೂ ಬಿಜಿಯಾಗಿಬಿಟ್ಟೆ ಆಸ್ಕರ್. ಇವತ್ತೇಕೊ ನಿನ್ನ ನೆನಪಾಯಿತು, ಅದಕ್ಕೆ ಫೋನ್ ಮಾಡಿಯೇ ಬಿಟ್ಟೆ. ಅವತ್ತು ಕಾಮಾಟಿಪುರ ನೋಡಿಕೊಂಡು ಹೋದೋನು ಇವತ್ತಿಗೂ ಪತ್ತೆ ಇಲ್ಲದೆ ಆಗಿಬಿಟ್ಟೆ. ಧಾರಾವಿಯಲ್ಲಿ ಓಡಾಡಬೇಕು ಅಂತ ಹೇಳಿದ್ದೆ?'